ಬೇರ್ಪಡಿಸಿ ಕ್ಯಾಪ್ ಹಾಕಿ ಇಟ್ಟಿದ್ದೀರ ತಾನೇ? ಎಂದು ಡಾ.ರಾಘವೇಂದ್ರ ನನ್ನ ಒಮ್ಮೆ ಗುಮಾನಿ ಕಣ್ಣಲ್ಲೇ ವಿಚಾರಿಸಿದರು. 'ಹೌದೌದು ಸರ್' ಎಂದೆ. ಯಾಕೆಂದರೆ ನಾನು ಲೆನ್ಸ್ ಜೊತೆ ಕ್ಯಾಮೆರಾವನ್ನೂ ಪೋಣಿಸಿಟ್ಟು ತುಂಬಾ ಸಲ ಅನಾಹುತ ಮಾಡಿಕೊಂಡಿದ್ದೇನೆ. ಕ್ಯಾಮೆರಾ ಮತ್ತು ಲೆನ್ಸ್ ಕೂಡುವ ಸ್ಥಳದ ನಟ್ಟು ಬೋಲ್ಟುಗಳು ತುಂಬಾ ಸೂಕ್ಷ್ಮ ಪ್ರವೃತ್ತಿಯವು. ಯಾವಾಗ ಲಟ್ ಎಂದು ಮುರಿದು ಹೋಗುವವೋ ಹೇಳುವುದು ಕಷ್ಟ. ಗುಡ್ಡಗಾಡು ಪ್ರದೇಶಗಳಲ್ಲಿ, ಹಳ್ಳ, ಕೊಳ್ಳ, ನದಿಗಳಂತಹ ಪ್ರದೇಶಗಳಲ್ಲಿ ಪಯಣಿಸುವಾಗ ಫಟ್ ಎಂದು ಮುರಿದು ಹೋದರೆ, ನಂತರ ಎಲ್ಲಾ ಫೋಟೊಗ್ರಫಿ ಬಿಸಾಕಿ ಪೆಕರನಂತೆ ಕೂರಬೇಕಾಗುತ್ತದೆ. ಕ್ಯಾಮೆರಾಗಳನ್ನು ಜೋಪಾನ ಮಾಡಿಟ್ಟುಕೊಳ್ಳುವ ವಿಷಯದಲ್ಲಿ ನಾನು ಖಂಡಿತಾ ಅಸಡ್ಡೆ ಮನುಷ್ಯ. ಬೇಜವಾಬ್ದಾರಿ ಕೂಡ ಹೌದು. ನಮ್ಮ ರಾಘು ಡಾಕ್ಟ್ರು ಮಾತ್ರ ಪುಟಾಣಿ ಮಕ್ಕಳಿಗೆ ಟೋಪಿ ಹಾಕಿ, ಕಾಲಿಗೆ ಸಾಕ್ಸ್ ಬಿಗಿದು, ಮುಖಕ್ಕೆ ಪೌಡರ್ ಹಚ್ಚಿ, ಕೆನ್ನೆಗೆ ಕಪ್ಪು ಬೊಟ್ಟು ಇಟ್ಟು, ಕಡೆಗೆ ತೊಟ್ಟಿಲಲ್ಲಿ ಜೋಪಾನ ಮಾಡಿ ಲಾಲಿ ಹಾಡಿ ಮಲಗಿಸುವಷ್ಟು ಜಾಗ್ರತೆಯನ್ನು ತಮ್ಮ ಕ್ಯಾಮೆರಾಗಳ ಬಗ್ಗೆ ತೋರಿಸುತ್ತಾರೆ.

ನಾವು ಊಟ ಮುಗಿಸಿ ತೀಸ್ತಾ ಬಜಾರ್ ಬಿಟ್ಟು ಹೊರಟೆವು. ನಾವು ಡಾರ್ಜಲಿಂಗ್ ಶೆಹರಕ್ಕೆ ಮೊದಲೇ ಸಿಗುವ ಲೇಪ್ಚಾ ಜಗತ್ ಎಂಬ ಊರಿನಲ್ಲಿ ಉಳಿಯಬೇಕಿತ್ತು. ಸಂಜೆಯ ಹೊತ್ತಿಗೆ ನಾವಲ್ಲಿ ತಲುಪಿದಾಗ ಚಳಿ ಆವರಿಸಿಕೊಂಡಿತ್ತು. ಪರ್ವತದ ಕೆಳಗಿನಿಂದ ಮಂಜಿನ ಮೋಡಗಳು ವೇಗವಾಗಿ ನಮ್ಮ ಕಡೆಗೇ ಓಡೋಡಿ ಬರುತ್ತಿದ್ದವು. ಸಣ್ಣಗೆ ಮಳೆ ಕೂಡ ಶುರುವಾಗಿತ್ತು. ಇವತ್ತು ಮಳೆಯಾದರೆ ನಾಳೆಯ ವಾತಾವರಣ ತಿಳಿಯಾಗಿರುತ್ತೆ. ಕೊಂಚ ಬಿಸಿಲು ಬಿದ್ದರೆ ಫೋಟೊಗ್ರಫಿ ಮಾಡಲು ಮಜವಾಗಿರುತ್ತೆ. ಹೀಗಾಗಿ ಏಳು ಗಂಟೆಯ ನಂತರ ಹೊರಡೋಣ ಎಂದು ಡ್ರೈವರ್, ಯಾನೆ ಕಾರ್ ಓನರ್, ಯಾನೆ ಮುಖ್ಯ ಬರ್ಡ್ ಗೈಡ್, ಆಗಿದ್ದ ರಂಟೂ ಸಾಹು ತಿಳಿಸಿದ.

ಅಲ್ಲಿನ ಸ್ಥಳೀಯ ನ್ಯಾಚುರಲಿಸ್ಟ್ ಪ್ರವೀಣ್ ಓಡೋಡಿ ಬಂದು ಲಗೇಜ್ ಇಳಿಸಲು ನಿಂತ. ರಂಟೂ ತಾನು ಸುತ್ತುವ ಕಡೆಗೆಲ್ಲಾ ಇಂತಹ ಸ್ಥಳೀಯ ಹಕ್ಕಿ ತೋರುಗರನ್ನು ನೇಮಿಸಿಕೊಂಡಿದ್ದ. ಜವಾಬ್ದಾರಿ ಇಲ್ಲದೆ ತೊಂಡಲೆಯುವ ಅನೇಕ ಪುಂಡು ಹುಡುಗರನ್ನು ರಂಟು ಸಾಹು ಗುರುತಿಸಿ ಬೆಳೆಸಿದ್ದ. ಬೇಜವಾಬ್ದಾರಿಗಳಾಗಿ ಊರಿಗೆ ಕಂಟಕರಾಗಿದ್ದ ಇವರನ್ನು ಹಿಡಿದು ಬೈದು, ಬುದ್ಧಿ ಹೇಳಿ, ಬರ್ಡ್ ಗೈಡ್ ಮಾಡಿದ್ದ. 'ಸಿಲ್ಲಿ ಕಾರಣಕ್ಕೆ ದಾರಿ ತಪ್ಪಿರುತ್ತಾರೆ ಸರ್. ಇವರನ್ನು ಮೊದಲು ಪ್ರೀತಿಸಿ, ಗೌರವಿಸಿ, ಗುರುತಿಸಬೇಕು. ಆಮೇಲೆ ನೀವು ಏನೇ ಹೇಳಿದರೂ ಮಾಡುತ್ತಾರೆ. ಮೊದಲೇ ಜಬರ್ದಸ್ತಿ ಮಾಡಿ, ತೆಗಳಿ, ಅವಮಾನ ಮಾಡಿದರೆ ಮತ್ತಷ್ಟು ಕೆರಳುತ್ತಾರೆ. ಇಲ್ಲಿನ ಹುಡುಗರಿಗೆ ಸರಿಯಾದ ದಿಕ್ಕು ದೆಸೆ ಇಲ್ಲ. ತಿಳಿಸಿ ಹೇಳುವ ಜನರೂ ಇಲ್ಲ. ಅಲ್ಲದೆ ಈ ಟೂರಿಸಂ ನಡೆಯುವ ಊರುಗಳ ಹುಡುಗರು ಬೇಗ ಹಾಳಾಗಿ ಹೋಗ್ತಾರೆ. ಅಯ್ಯಾಷಿ ಕಲಿತು ಹಾಳಾದ ಕೆಲವರನ್ನು ಪ್ರೀತಿಸಿ, ಪೂಸಿ ಹೊಸೆದು ಸರಿಮಾಡಿದ್ದೇನೆ' ಎಂದು ಹೆಮ್ಮೆಯಿಂದ ನಕ್ಕ.

ಒಣ ಕಡ್ಡಿಯಂತೆ ಬಾಡಿ ಹೋಗಿದ್ದ ಪ್ರವೀಣ್ ಒಂದಾನೊಂದು ಕಾಲದಲ್ಲಿ ಲೇಪ್ಚಾ ಜಗತ್ತಿನ ಪುಡಿ ರೌಡಿಯಂತೆ. ಸಾಕ್ಷಿಗೆ ಮುಖದ ಮೇಲೆ ಚಾಕುವಿನಿಂದ ಎಳೆಸಿಕೊಂಡ ಹಳೆಗಾಯದ ಗೆರೆಗಳಿದ್ದವು. ತನ್ನ ಮೂಲ ಕಸುಬು ತೊರೆದು ಈಗ ಹಕ್ಕಿ ತೋರುಗನಾಗಿದ್ದಾನೆ. 'ಚಿಡಿಯೋನೆ ಹಮಾರಿ ಕಾಲಿ ಜಿಂದಗಿ ಮೀಠಾಕೆ ಹರಿಬರಿ ಬನಾದಿಯಾ' ಎಂದು ಪಿಚ್ಚನೆ ನಕ್ಕ. ಬಿಡುವಿಲ್ಲದೆ ಬೀಡಿ, ಗಾಂಜ, ಸೇದಿ ಅವನ ಹಲ್ಲುಗಳು ತಮ್ಮ ಬಿಳಿ ಪಾವಿತ್ರ್ಯ ಕಳಕೊಂಡಿದ್ದವು. 'ನಾಳೆ ಮೊದಲಿಗೆ ಅಪರೂಪದ ಡಾರ್ಜಲಿಂಗ್ ವುಡ್ ಪೆಕರ್ ತೋರಿಸುತ್ತೀನಿ ಸರ್' ಎಂದು ಹುರುಪಿನಿಂದ ಹೇಳಿದ. ಈಗಾಗಲೇ ಅಪರೂಪವಾಗಿರುವ ಅದನ್ನು ನೋಡುವುದೇ ಒಂದು ಪುಣ್ಯ ಎಂದು ನಮ್ಮ ರೋಮಾಂಚನ ಹೆಚ್ಚಿಸಿದ.

ನಾವು ಉಳಿದಿದ್ದ ಹೋಟೇಲಿನ ಮಾಲೀಕ ಒಬ್ಬ ಚಿತ್ರ ಕಲಾವಿದ. ಹಲವಾರು ಚೆಂದದ ಚಿತ್ರಗಳನ್ನು ಬರೆದು ತೂಗು ಹಾಕಿದ್ದ. ನಾನಿರುವ ಎರಡು ದಿನವೂ ಅವನು ಏಕಾಗ್ರತೆಯಿಂದ ಬಣ್ಣದ ಲೋಕದಲ್ಲಿ ಮುಳುಗಿ ಹೋಗಿರುವುದನ್ನು ಕಂಡೆ. ಡಾರ್ಜಲಿಂಗ್ ನ ಪ್ರಕೃತಿ ಮತ್ತು ಪಕ್ಷಿಗಳನ್ನು ಆತ ಮರು ಸೃಷ್ಟಿ ಮಾಡುತ್ತಿದ್ದ. ಬೆಳಗ್ಗೆ ಎದ್ದು ಆ ಚಿತ್ರಗಳ ನೋಡುತ್ತಾ ನಿಂತಾಗ, 'ಸರ್ ಅಲ್ಲಿಗೆ ನಡೆದೇ ಹೋಗಬೇಕು ಟ್ರೈ ಪ್ಯಾಡು ನಾವೇ ಹೊತ್ತು ತರುತ್ತೀವಿ. ನೀವು ಜಾಗ್ರತೆ ಬನ್ನಿ'